# ಸರ್ಕಾರಿ ಪ್ರೌಢಶಾಲೆ,ರೂಪನಗುಡಿ ಬಳ್ಳಾರಿ ಪೂರ್ವ ವಲಯ

## ಹತ್ತನೆಯ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ–4

## ಪ್ರಥಮ ಭಾಷೆ – ಸಿರಿ ಕನ್ನಡ

**ಗರಿಷ್ಠ ಅಂಕಗಳು:100** **ಅವಧಿ:3:00**

ಸೂಚನೆಗಳು : ಪ್ರಶ್ನೆ ಪತ್ರಿಕೆಯು ಎ. ಬಿ. ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. ಉತ್ತರಗಳನ್ನು ನೇರವೂ, ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ ಪ್ರತಿ ಪ್ರಶ್ನೆಗೂ ಉತ್ತಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಉತ್ತರ ಬರೆಯುವುದು ಖಡ್ಡಾಯ.

### ಭಾಗ–ಎ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **9*1=9**

1. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
2. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?
3. ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?
4. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
5. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
6. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?
7. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?
8. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ ?
9. ಪಾರಿವಾಳಗಳ ಆನಂದಕ್ಕೆ ಕ್ಫರಣವೇನು?

**ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

10. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆ ಯಾವುದು?
11. ವಚನ ಧರ್ಮದ ಬಗೆಗೆ ದೇವನೂರರ ಅಭಿಪ್ರಾಯ ಏನು?
12. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?
13. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ತಿಳಿಸಿ?
14. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?
15. ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು?
16. ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ?
17. ಲೇಖಕರ ಪ್ರಕಾರ 'ವಿಶ್ವಧರ್ಮ' ಯಾವಾಗ ರೂಪಿತವಾಗಬಲ್ಲದು?
18. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?
19. ಐದನೇಯ ಒಗಟಿನ 'ತಾವರೆ ಬೇರು' ಎಂಬುದು ಉತ್ತರ ಹೇಗೆ?

**ಸಂದರ್ಭದೊಡನೆ ಸ್ವಾರಸ್ಯಸಹಿತ ವಿವರಿಸಿ.** **4*3=12**

20. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು"
21. "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು"

22. “ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು”

23. “ಪ್ರೀತಿಯ ಹಣತೆಯ ಹಚ್ಚೋಣ”

ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6

24. ಪು.ತಿ.ನರಸಿಂಹಾಚಾರ್

25. ಲಕ್ಷ್ಮೀಶ

ಈ ಕೆಳಗಿನ ಪದ್ಯಭಾಗ ಪೂರ್ಣಗೊಳಿಸಿ ಬರೆಯಿರಿ 1*4=4

26. ಕೊರಳ ಸೆರೆ ಹಿಗ್ಗಿದವು ದೃಗಜಲ

----------------------

ನುರಿಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ॥

ಅಥವಾ

ಮಾರಿಗೌತಣವಾಯ್ತು ನಾಳಿನ

----------------------

ವೀರಶೈವರ ನೋಯಿಸೆನು ರಾಜೀವಸಖನಾಣೆ॥

ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1*4=4

27. ನೀನುಳ್ಳೊಡೆಲ್ಲರೊಳರೆಮ
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ
ಭಾನುವೇ ಸಾಲದೆ ಪಗಲಿನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ.

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 2*4=8

28. ಗೊರೂರು ರಾಮಸ್ವಾಮಿ ಅಯ್ಯಂಗಾರರರ ವೇಷಭೋಷಣಗಳು ಹೇಗಿದ್ದವು?

ಅಥವಾ

ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರು ಅಮೇರಿಕದ ಉಪಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು?

29. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?

ಅಥವಾ

‘ಹಕ್ಕಿ ಹಾರುತಿದೆ ನೋಡಿದಿರಾ’ ಈ ಕವಿತೆಯ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ವಿವರಿಸಿ.

ಈ ಕೆಳಗಿನ ಪದ್ಯಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 1*4=4 (2+2)

30. ಸುಮಾರು ಸಾವಿರ ವರ್ಷಗಳ ಹಿಂದೆ ಬದುಕಿದ್ದು ಕನ್ನಡದಲ್ಲಿ ಉತ್ತಮ ಕಾವ್ಯರಚನೆಗೈದು. ಕನ್ನಡದ ಅಗ್ರಶ್ರೇಣಿಯ ಕವಿ ಎನಿಸಿಕೊಂಡು ಕೀರ್ತಿಯ ಸೊಡರಿಟ್ಟ ಕವಿ ರನ್ನ ಈತನ ಹುಟ್ಟೂರು ಮುದವೊಳಲು, ರತ್ನತ್ರಯರಲ್ಲಿ ಒಬ್ಬ. ಚಾಲುಕ್ಯ ಚಕ್ರವರ್ತಿ ಇಮ್ಮುಡಿ ತೈಲಪನಿಂದ “ಕವಿಚಕ್ರವರ್ತಿ” ಎಂಬ ಬಿರುದನ್ನು ಪಡೆದವನು. ರನ್ನ ರನ್ನನ ವೈಯಕ್ತಿಕ ವಿಚಾರ ತಿಳಿದುಬರುವುದು ಅತ್ಯಲ್ಪ ಆದರೆ ತನ್ನ ಪಾಂಡಿತ್ಯದ ಬಗ್ಗೆ ಬಹಳ ಹೊಗಳಕೊಂಡಿದ್ದಾನೆ. ರತ್ನ ಪರೀಕ್ಷಕನೆಂದು ಸರ್ಪದ ಹೆಡೆಯ ಮೇಲಿನ ರತ್ನವನ್ನು ಪರೀಕ್ಷಿಸಲು ಸಾಧ್ಯವೇ

ಹಾಗೆ ಪರೀಕ್ಷಿಸಲುವವನಿಗೆ ಎಂಟೆದೆ ಇರಬೇಕು. ಹಾಗೆಯೇ ನನ್ನ ಕೃತಿ ರತ್ನವನ್ನು ಪರೀಕ್ಷಿಸುವವನಿಗೂ ಎಂಟೆದೆ ಇರಬೇಕು "ಬಹು ರತ್ನ ವಸುಂಧರಾ" ಎಂಬ ಮಾತು ಸುಳ್ಳು ಭೂಮಿಯಲ್ಲಿರುವ ಕೃತಿಗಳು ನಾಲ್ಕು ಪರುಶುರಾಮ ಚರತೆ, ಚಕ್ರೇಶ್ವರ ಚರತೆ, ಅಜಿತ ತೀರ್ಥಂಕರ ಪುರಾಣ ತಿಲಕ, ಸಾಹಸ ಭೀಮ ವಿಜಯ, ಅಥವಾ ಗದಾಯುದ್ಧ ಇವೆ ನಾಲ್ಕು ಈ ನಾಲ್ಕುರಲ್ಲಿ ಮೊದಲಿನ ಎರಡು ಸಿಕ್ಕಿಲ್ಲ ಅಜಿತ ತೀರ್ಥಂಕರ ಪುರಾಣ ಧಾರ್ಮಿಕ ಕೃತಿಯಾಗಿದೆ. ಸಾಹಸ ಭೀಮ ವಿಜಯ ಲೌಕಿಕ ಕೃತಿ.

ಪ್ರಶ್ನೆಗಳು :-

1. ರನ್ನನು ತನ್ನ ವಿದ್ವತನ್ನು ಹೇಗೆ ವರ್ಣಿಸಿಕೊಂಡಿದ್ದಾನೆ?

2. ರನ್ನನು ಬರೆದ ಕಾವ್ಯಗಳು ಯಾವುವು?

## ಭಾಗ-'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ. ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. **10*1=10**

31. ಕನ್ನಡ ವರ್ಣಮಾಲೆಯಲ್ಲಿನ ಸಂಧ್ಯಾಕ್ಷರಗಳು :-

ಎ) ಐ,ಔ ಬಿ) ಒ,ಓ ಸಿ) ಅಂ,ಅಃ ಡಿ) ಎ,ಏ.

32. ಆಗಮಸಂಧಿಗೆ ಉದಾಹರಣೆ

ಎ) ಊರೂರು ಬಿ) ಮಗುವಿಗೆ ಸಿ) ಮಳೆಗಾಲ ಡಿ) ದೇವಾಲಯ.

33. 'ದಿವಾನ ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.

ಎ) ಉರ್ದು ಬಿ) ಸಂಸ್ಕೃತ ಸಿ) ಪೋರ್ಚುಗಲ್ ಡಿ) ಪರ್ಷಿಯನ್.

34. 'ಘಟಸಂಭೂತ' ಈ ಸಮಾಸಕ್ಕೆ ಉದಾಹರಣೆ

ಎ) ತತ್ಪುರಷ ಸಮಾಸ ಬಿ) ಕ್ರಿಯಾಸಮಾಸ ಸಿ) ಅಂಶಿ ಸಮಾಸ ಡಿ) ಬಹುವ್ರೀಹಿ ಸಮಾಸ.

35. ಪಾರಿಭಾಷಿಕ ಪದಗಳನ್ನು ಬಳಸುವಾಗ ಈ ಚಿಹ್ನೆಯನ್ನು ಬಳಸುತ್ತೇವೆ.

ಎ) ಪೂರ್ಣ ವಿರಾಮ ಬಿ) ಉದ್ಧರಣ ಸಿ) ವಾಕ್ಯವೇಷ್ಠನ ಡಿ) ಭಾವಸೂಚಕ.

36. "ಸ್ವತಂತ್ರ್ಯ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಭಿಪ್ರಾಯದ ವಾಕ್ಯವಾಗಿದ್ದರೆ" ಅಂತಹ ವಾಕ್ಯವು

ಎ) ಮಿಶ್ರವಾಕ್ಯ ಬಿ) ಸಂಯೋಜಿತ ಸಿ) ಸಾಮಾನ್ಯ ಡಿ) ನಿಷೇಧಾರ್ಥಕ.

37. ಪಂಚಮಿ ವಿಭಕ್ತಿಯ ಕಾರಕಾರ್ಥಕ ಪದ

ಎ) ಸಂಪ್ರದಾನ ಬಿ) ಅಪದಾನ ಸಿ) ಸಂಬಂಧ ಡಿ) ಅಧಿಕರಣ.

38. 'ಕನ್ನಡಿಗ' ಪದವು ಈ ವ್ಯಾಕರಣಾಂಶವಾಗಿದೆ.

ಎ) ತದ್ದಿತಾಂತನಾಮ ಬಿ) ಕೃದಂತ ಸಿ) ಕೃದಂತಭಾವನಾಮ ಡಿ) ತದ್ದಿತಾಂತ ಅವ್ಯಯ.

39. ಅವಳು ಶಾಲೆಗೆ ದಿನಾಲು ಬರುತ್ತಾಳೆ-ಈ ವಾಕ್ಯದಲ್ಲಿರುವ ಸರ್ವನಾಮಪದ.

ಎ) ದಿನಾಲು ಬಿ) ಶಾಲೆಗೆ ಸಿ) ಬರುತ್ತಾಳೆ ಡಿ) ಅವಳು.

40. ' ಗುರು ವೊಂದಾದಿಯೊಳ್____

ಎ) ಉತ್ಪಲಂ ಬಿ) ಚಂಪಕ ಸಿ) ಮತೇಭ ಡಿ) ಸ್ರಗ್ಧರಾ

ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ 4*1=4

41. ತುತ್ತಾ ತುದಿ : ದ್ವಿರುಕ್ತಿ :: ಮನೆ ಮಠ:______________

42. ಪವನನಂದನ : ಭೀಮ :: ರವಿಸುತ:______________

43. ದಿಟ್ಟಿ : ದೃಷ್ಟಿ :: ಬೆಹಾರಿ:______________

44. ಬಳೆಯನ್ನು ಮಾರುವವನು : ಬಳೆಗಾರ :: ಕುಂಭವನ್ನು:ಮಾಡುವವನು______________

45. ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ,ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3

ಭಾನುವೇ ಸಾಲದೆ ಪಗಲಿನಿ

ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ.

ಅಥವಾ

ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ

46. ಅಲಂಕಾರ ಹೆಸರಿಸಿ ಲಕ್ಷಣ ಬರೆದು ಸಮನ್ವಯಿಸಿ. 1*3=3

"ನುಡಿದರೆ ಮುತ್ತಿನ ಹಾರದಂತಿರಬೇಕು"

ಅಥವಾ

"ಮಾರಿಗೌತಣವಾಯ್ತು ನಾಳಿನ ಭಾರತವು"

47. ಈ ಕೆಳಗಿನ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿರಿ ಬರೆಯಿರಿ. 1*3=3

*ದೇಶ ಸುತ್ತ ನೋಡು ಕೋಶ ಓದು

*ಬೆಳೆಯುವ ಸಿರಿ ಮೊಳಕೆಯಲ್ಲಿ

*ಕಟ್ಟುವುದು ಕಠೀಣ ಕೆಡಿಸುವುದು ಸುಲಭ.

48. ನಿಮ್ಮನ್ನು ಬಳ್ಳಾರಿಯ ಕಲ್ಪತರು ಪ್ರೌಢಶಾಲೆಯ ಸುಮನ ಎಂದು ಭಾವಿಸಿ ಕೊಂಡು ಕನ್ನಡ ಸಾಹಿತ್ಯ ಪರಿಷತ್ತ ಬೆಂಗಳೂರು ಪ್ರಕಟಿಸಿರುವ 'ಕನ್ನಡ ನಿಘಂಟು' ಇದರ ಹತ್ತು ಪತ್ರಿಕೆಗಳನ್ನು ಕಳುಹಿಸಿಕೊಡುವಂತೆ ಕೋರಿ ಪತ್ರ ಬರೆಯಿರಿ. 1*5=5

ಅಥವಾ

ನಿಮ್ಮನ್ನು ಹೊಸಪೇಟೆಯ ಪ್ರಿಯಾದರ್ಶಿನಿ ಶಾಲೆಯ ಅಮೋಘ ಎಂದು ಭಾವಿಸಿಕೊಂಡು ಮೈಸೂರಿನ ಕುವೆಂಪು ನಗರದಲ್ಲಿರುವ ನಿಮ್ಮ ತಂದೆಗೆ ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

49.ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು 15 ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧಬರೆಯಿರಿ. 1*5=5

* ಅತೀವೃಷ್ಠಿ ಮತ್ತು ಅನಾವೃಷ್ಠಿಯಿಂದಾಗುವ ಪರಿಣಾಮಗಳು

* ರಾಷ್ಟ್ರೀಯ ಹಬ್ಬಗಳು

* ಅಂತರ್ ಜಲದ ಸದ್ಬಳಕೆ